ಆಟದ ಜತೆಗೇ ಕಾಣುವ ಹೊಟ್ಟೆಯತ್ತ ಕ್ಯಾಮೆರಾ ಕಣ್ಣನ್ನು ಫೋಕಸ್ ಮಾಡುವ ಛಾಯಾಗ್ರಾಹಕರ ಒಳಗಣ್ಣು ಹೇಗಿರುತ್ತೆನ್ನುವುದನ್ನು ಸಾನಿಯಾ ಮಿರ್ಜಾ ಬಲ್ಲವರಾಗಿದ್ದರು. ಕಪ್ಪಗೆ, ದಪ್ಪಗಿರುವ ಕಾರಣಕ್ಕೆ ಬಂದ ಟೀಕೆಗಳ ಏಸ್‌ಗಳಿಗೆಲ್ಲ ಆಟದ ಮೂಲಕವೇ ಉತ್ತರವಿತ್ತ ಸೆರೆನಾ ವಿಲಿಯಮ್ಸ್, ‘ನಾನಿರೋದೇ ಹೀಗೆ, ಅದೇನು ಮಾಡುವಿರೋ ಮಾಡಿ’ ಎಂದು ಹುಬ್ಬೇರಿಸುವಂತೆ ಆಡಿದ್ದವರು. ಅಂಥ ಸೆರೆನಾ ಅವರಿಗೂ ನವೊಮಿ ಒಸಾಕಾ ಈಗ ಮಗು ಮನಸ್ಸಿನ ಹುಡುಗಿಯಂತೆ ಕಾಣುತ್ತಿದ್ದಾರೆ. ‘ನನ್ನದು ದಪ್ಪ ಚರ್ಮ. ಅವಳದು ತೆಳು. ನಾನು ಯಾರೇ ಕೂಗಾಡಲಿ, ನನ್ನ ನೆಮ್ಮದಿಗೆ ಭಂಗವಿಲ್ಲದಂತೆ ಬದುಕಿದವಳು. ಅವಳಿಗೆ ಹಾಗೆ ಇರುವುದು ಸಾಧ್ಯವಾಗದು. ಒಬ್ಬೊಬ್ಬರ ಮನಸ್ಸೂ ಬೇರೆ ಬೇರೆ. ಸರಿಹೋಗಲಿ. ಚೆನ್ನಾಗಿ ಆಡು ಒಸಾಕಾ’ ಎಂಬ ಅವರ ಹಾರೈಕೆಯ ನುಡಿಯೇ ಸೆರೆನಾ ಕೂಡ ತಾಯಿಯಲ್ಲವೇ ಎನ್ನುವುದಕ್ಕೆ ಸಾಕ್ಷಿ. ಹೆರಿಗೆಯಾದಾಗ ಹೊಟ್ಟೆಯ ಭಾಗಕ್ಕೆ ಸ್ಟಂಟ್ ಹಾಕಿ, ಆಮೇಲೆ ಅದನ್ನು ಹೊರತೆಗೆದು ವೈದ್ಯರು ಕೊಟ್ಟಿದ್ದರು. ಅದನ್ನು ಅಡುಗೆಮನೆಯ ಶೆಲ್ಫ್ ಮೇಲೆ ಸ್ಫೂರ್ತಿಗೆ ಎಂದು ಇಟ್ಟುಕೊಂಡು, ದಿನವೂ ಅದನ್ನು ನೋಡುತ್ತಾ ವ್ಯಾಯಾಮ ಮಾಡಿ ಮತ್ತೆ ಆಟಕ್ಕೆ ಕುದುರಿಕೊಂಡ ಗಟ್ಟಿಗಿತ್ತಿ ಸೆರೆನಾ.

ನವೊಮಿ 2018ರಲ್ಲಿ ಅವರು ಅಮೆರಿಕ ಓಪನ್ ಗೆದ್ದರು. ಗೆಲ್ಲುವ ಮೊದಲು ಸೆರೆನಾ ನಡುವೆ ಫೈನಲ್ ಪಂದ್ಯದ ಕೊನೆಗೆ ಬಿಸಿ ಬಿಸಿ ವಾದವಾಗಿತ್ತು. ಅಂಪೈರ್ ಕಾರ್ಲೋಸ್ ರ್‍ಯಾಮೊಸ್ ಮಧ್ಯ ಪ್ರವೇಶಿಸಿ ಸೆರೆನಾ ಮೇಲೆ ಒಂದು ಗೇಮ್ ಪೆನಾಲ್ಟಿ ವಿಧಿಸಿದರು. ಪಂದ್ಯದಲ್ಲಿ ಕೊನೆಗೆ ನವೊಮಿ ಗೆದ್ದರು. ಅಂಗಾತ ಮಲಗಿ, ಆಕಾಶ ದಿಟ್ಟಿಸಿ ಎದ್ದು ಹೊರಡುವಷ್ಟರಲ್ಲಿ ಅಮೆರಿಕದ ಪ್ರೇಕ್ಷಕರೆಲ್ಲ ‘ಬೂ’ ಎಂದು ಕೂಗಿದರು. ಪ್ರಶಸ್ತಿ ವಿತರಣಾ ಸಮಾರಂಭಕ್ಕೆ ಅನೇಕರು ಗೈರುಹಾಜರಾದರು. ನವೊಮಿ ಕಣ್ಣಲ್ಲಿ ಮೊದಲ ಗ್ರ್ಯಾನ್ ಸ್ಲ್ಯಾಮ್ ಪ್ರಶಸ್ತಿ ಗೆದ್ದ ಖುಷಿಯ ಹನಿಗಳ ಜತೆಗೆ ಪ್ರೇಕ್ಷಕರ ವರ್ತನೆ ತಂದ ಅಳುವಿನ ಪಸೆಯೂ ಸೇರಿತ್ತು.

ಮಾರ್ಕೆಟಿಂಗ್‌ನ ಭಾಗವಾಗಿ ಸುದ್ದಿಗೋಷ್ಠಿ, ಸಂದರ್ಶನಗಳು ಬಂದಿರುವ ದಿನಗಳಲ್ಲಿ ನವೊಮಿ ಸುದ್ದಿಗೋಷ್ಠಿಗೆ ಒಲ್ಲೆ ಎನ್ನುವುದು ಬಹುತೇಕರಿಗೆ ಅಜೀರ್ಣ. ಹಾಗಿದ್ದರೆ ದಂಡ ಕಟ್ಟಬೇಕೆಂದರು. ನವೊಮಿ ಅದಕ್ಕೂ ಒಪ್ಪಿ, ದಂಡ ಪಾವತಿಸಿದರು. ಮುಂದೆ ಹೀಗೆಯೇ ಮಾಡಿದರೆ ಎಲ್ಲ ಟೂರ್ನಿಗಳಿಂದಲೂ ನಿಷೇಧಿಸಬೇಕಾದೀತು ಎಂಬ ಎಚ್ಚರಿಕೆಯೂ ಹೊರಬಿತ್ತು. ‘ಇನ್ನಾಗದು ಇನ್ನಾಗದು’ ಎನ್ನುತ್ತಾ ನವೊಮಿ ಟೂರ್ನಿಯಿಂದಲೇ ಹೊರನಡೆದರು. ‘ಆಡುವವರ ಗಮನವೆಲ್ಲ ಆಟದ ಕಡೆಗೆ ಇರಲಿ. ನನ್ನ ವಿಷಯವೇ ಯಾಕೆ ಚರ್ಚೆಯ



ವಸ್ತುವಾಗಬೇಕು? ನಾನೇ ಹೊರನಡೆಯುವೆ’ ಎಂಬ ಅವರ ನುಡಿಯಲ್ಲಿ ಬೆರೆತಿರುವ ನೋವು ಎಲ್ಲರಿಗೂ ಕಾಣಲು ಸಾಧ್ಯವಿಲ್ಲ.

ಹೋದ ವರ್ಷ ಅಮೆರಿಕ ಓಪನ್ ಟೆನಿಸ್‌ನ ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ ಇಪ್ಪತ್ತೆರಡರ ಚಿಗರೆಯಂಥ ಹುಡುಗಿ ನವೊಮಿ ಸೋಲಿಸಿದ್ದು ಮೂರು ವರ್ಷದ ಮಗನ ತಲೆ ನೇವರಿಸಿದ ಮೇಲೆ ಆಡಲು ಬಂದಿದ್ದ ಅಜರೆಂಕಾ ಅವರನ್ನು. ಅವರೂ ತಮ್ಮ ಮಗನನ್ನು ಪಡೆಯಲು ಕೋರ್ಟ್‌ಗೆ ಅಲೆದಲೆದು ಹೋರಾಡಿದ ತಾಯಿಯೇ.

ಹಯಾಟಿ ದೇಶದ ಅಪ್ಪ, ಜಪಾನಿನ ಅಮ್ಮ ಇಬ್ಬರ ಕೂಸು ನವೊಮಿ. ರ್‍ಯಾಕೆಟ್ ಹಿಡಿದದ್ದು ಮೂರನೇ ವಯಸ್ಸಿನಲ್ಲಿ. ಅಮೆರಿಕದ ಕ್ಯಾಲಿಫೋರ್ನಿಯಾದ



ಬೆವರ್ಲಿ ಹಿಲ್ಸ್‌ನಲ್ಲಿ ನೆಲೆಗೊಂಡರೂ ಪ್ರತಿನಿಧಿಸುವ ದೇಶ ಜಪಾನ್. ಹೀಗಾಗಿ ಏಷ್ಯಾದ ಕಣ್ಮಣಿ. ಕಳೆದ ವರ್ಷ ಅತಿ ಹೆಚ್ಚು ಸಂಪಾದನೆ ಮಾಡಿರುವ ಜಗತ್ತಿನ ಅಥ್ಲೀಟ್‌ಗಳಲ್ಲಿ 29ನೆಯವರು.

ನವೊಮಿ ಅಪ್ಪ ಲಿಯೊನಾರ್ಡ್ ಫ್ರಾಂಕೋಯಿಸ್ 1999ರಲ್ಲಿ ಫ್ರೆಂಚ್ ಓಪನ್ ನೋಡುವಾಗ ವಿಲಿಯಮ್ಸ್ ಸಹೋದರಿಯರತ್ತ ಕಣ್ಣು ಕೀಲಿಸಿದ್ದರು. ಅವರಿಗೂ ಇಬ್ಬರು ಹೆಣ್ಣುಮಕ್ಕಳು. ದೊಡ್ಡವಳು ಮೇರಿ. ಚಿಕ್ಕವಳು ನವೊಮಿ. ರಿಚರ್ಡ್ ವಿಲಿಯಮ್ಸ್ ಖುದ್ದು ಟೆನಿಸ್ ಆಡಿಲ್ಲದೇ ಇದ್ದರೂ ಅದು ಹೇಗೆ ವೀನಸ್–ಸೆರೆನಾ ಇಬ್ಬರನ್ನೂ ಟೆನಿಸ್ ಆಟಗಾರ್ತಿಯರನ್ನಾಗಿ ಬೆಳೆಸಿದ ಎನ್ನುವುದರ ಕುರಿತು ಲಿಯೊನಾರ್ಡ್ ಅರಿವು ಮೂಡಿಸಿಕೊಂಡರು. ತಮ್ಮ ಮಕ್ಕಳಿಗೂ ಆ ಅಪ್ಪ ಕೊಟ್ಟಂತೆಯೇ ತರಬೇತಿ ನೀಡಬೇಕೆಂದು ನೀಲನಕ್ಷೆ ತಯಾರಿಸಿದರು. ಮೇರಿ ಕೂಡ ವೃತ್ತಿಪರ ಆಟಗಾರ್ತಿಯೇ. ಆದರೆ, ನವೊಮಿ ಇನ್ನೂ ಒಂದು ಹೆಜ್ಜೆ ಮುಂದೆ. ನವೊಮಿಗೆ ಎಂಟು ತುಂಬಿದ ಹೊತ್ತಿಗೆ ಅಮೆರಿಕದ ಫ್ಲಾರಿಡಾಗೆ ಸ್ಥಳಾಂತರಗೊಂಡಿದ್ದು ಟೆನಿಸ್ ತರಬೇತಿಯನ್ನು ಇನ್ನಷ್ಟು ಶಿಷ್ಟಗೊಳಿಸಲೆಂದು. ಐಎಸ್‌ಪಿ ಅಕಾಡೆಮಿಯಲ್ಲಿ ಪ್ಯಾಟ್ರಿಕ್ ಟಾಮಾ ಗರಡಿಯಲ್ಲಿ 15ನೇ ವಯಸ್ಸಿನ ಹೊತ್ತಿಗೆ ಪಳಗಿದ ನವೊಮಿ, 2014ರಲ್ಲಿ ಹೆರಾಲ್ಡ್ ಸಾಲೊಮನ್ ಟೆನಿಸ್ ಅಕಾಡೆಮಿಯತ್ತ ನಡೆದರು. ಅಲ್ಲಿಂದ ಹೊರಳಿದ್ದು ಪ್ರೊವರ್ಲ್ಡ್ ಟೆನಿಸ್ ಅಕಾಡೆಮಿಯತ್ತ.

ಜಪಾನ್‌ನಲ್ಲಿ ಕುಟುಂಬದ ಸದಸ್ಯರೆಲ್ಲ ಹೆಸರನ್ನು ನೋಂದಾಯಿಸುವಾಗ ಅಲ್ಲಿನ ಸಂಸ್ಕೃತಿ, ಸ್ಥಳ ಬಿಂಬಿಸುವ ಒಂದು ಪದ ಇರಲೇಬೇಕೆಂಬ ನಿಮಯಮವಿದೆ. ಅದಕ್ಕೇ ನವೊಮಿ ತಮ್ಮ ಹೆಸರಿನ ಪಕ್ಕ ಒಸಾಕ ಎನ್ನುವುದನ್ನು ಸೇರಿಸಿಕೊಂಡದ್ದು. ಈ ಹುಡುಗಿಯ ಸರ್ವ್‌ಗಳ ವೇಗ ನೋಡಿ, ಅವರ ಹದಿನಾರರ ಹರೆಯದಲ್ಲಿ ತಮ್ಮ ದೇಶಕ್ಕೇ ಆಡುವಂತೆ ಅಮೆರಿಕದ ಟೆನಿಸ್ ಸಂಸ್ಥೆ ಆಹ್ವಾನಿಸಿದ್ದು ಕೂಡ ವಿಶೇಷವೇ. ಆದರೆ, ನವೊಮಿ ನಯವಾಗಿ ಅದನ್ನು ನಿರಾಕರಿಸಿದರು.

2014ರಲ್ಲಿ ಡಬ್ಲ್ಯುಟಿಎ ಟೂರ್ ಪದಾರ್ಪಣೆ ಋತುವಿನಲ್ಲೇ ಅಮೆರಿಕ ಓಪನ್ ಮಾಜಿ ಚಾಂಪಿಯನ್ ಸಮಾಂತಾ ಸ್ಟೊಸುರ್ ಅವರನ್ನು ಮಣಿಸಿದಾಗಲೇ ಮಾಧ್ಯಮಗಳು ನವೊಮಿಯನ್ನು ಕೊಂಡಾಡಿದವು. 2019ರಲ್ಲಿ ಆಸ್ಟ್ರೇಲಿಯಾ ಓಪನ್ ಗೆದ್ದಾಗ ರ್‍ಯಾಂಕಿಂಗ್‌ನಲ್ಲಿ ನಂಬರ್ ಒನ್ ಸ್ಥಾನಕ್ಕೇರಿದ್ದಾಯಿತು.

ಇಪ್ಪತ್ತು ಇಪ್ಪತ್ತೊಂದರ ಹುಡುಗಿಗೆ ಜನಪ್ರಿಯತೆ ನಿಭಾಯಿಸುವುದು ಕಷ್ಟವಾಯಿತು. ಆಸ್ಟ್ರೇಲಿಯಾ ಓಪನ್ ಗೆದ್ದ ಕೆಲವೇ ದಿನಗಳಲ್ಲಿ ತನ್ನ ತರಬೇತುದಾರ ಸಾಶಾ ಬಾಜಿನ್ ಅವರಿಗೆ ಟ್ವೀಟ್ ಮೂಲಕವೇ, ‘ಇನ್ನು ನನಗೆ ನಿಮ್ಮ ತರಬೇತಿಯ ಅವಶ್ಯಕತೆ ಇಲ್ಲ’ ಎನ್ನುವ ಧಾಟಿಯಲ್ಲಿ ಬರೆದ ನವೊಮಿ, ಆಮೇಲೆ ಲಯ ತಪ್ಪಿದರು. 2019ರಲ್ಲಿ ಅಮೆರಿಕ ಓಪನ್‌ನಲ್ಲಿ ನಾಲ್ಕನೇ ಸುತ್ತಿನಲ್ಲೇ ಬೆಲಿಂಡಾ ಬನ್ಸಿಕ್ ಎದುರು ಸೋತರು. ಕಳೆದ ವರ್ಷ ಆಸ್ಟ್ರೇಲಿಯಾ ಓಪನ್‌ನಲ್ಲಿ ಕೊಕೊ ಗಾಫ್ ಎದುರು ತಪ್ಪುಗಳ ಮೇಲೆ ತಪ್ಪುಗಳನ್ನು ಮಾಡಿ ಬಸವಳಿದದ್ದನ್ನೂ ಕಂಡಿದ್ದೇವೆ.

ಆಟದಂಗಳದ ಹೊರಗೂ ನವೊಮಿ ಸಾಮಾಜಿಕ ನ್ಯಾಯಕ್ಕಾಗಿ ಆಗ್ರಹಿಸಿದವರು. ಕಪ್ಪುವರ್ಣೀಯರ ಮೇಲೆ ಅನ್ಯಾಯವಾದರೆ ಅಲ್ಲಿ ಹೋಗಿ ನಿಲ್ಲುವ ಜಾಯಮಾನ.

ನೊವಾಕ್ ಜೊಕೊವಿಚ್, ರಫೆಲ್ ನಡಾಲ್ ತರಹದ ಆಟಗಾರರೂ ‘ಸುದ್ದಿಗಾರರ ಜತೆ ಮಾತನಾಡುವುದು ಅನಿವಾರ್ಯ. ಅದಕ್ಕೆ ಪಳಗಬೇಕು’ ಎಂದು ಕಿವಿಮಾತು ಹೇಳಿದ್ದಾರೆ. ಹಿಂದೆ, ಫಾರ್ಮುಲಾ ಒನ್ ಚಾಲಕ ಮೈಕಲ್ ಶೂಮಾಕರ್ ತಮ್ಮ ಕಾರಿನ ನಿಯಂತ್ರಣ ಕಳೆದುಕೊಳ್ಳತೊಡಗಿದಾಗ ಭಾರತದ ಯೋಗಗುರುವನ್ನು ಕರೆಸಿಕೊಂಡು ಮನೋನಿಗ್ರಹ ಮಾಡಿಕೊಂಡಿದ್ದರಂತೆ. ಈಗ ನವೊಮಿಗೂ ಅಂಥದ್ದೇ ಯಾವುದಾದರೂ ದಾರಿ ತೆರೆದುಕೊಳ್ಳಬೇಕಿದೆ. ಎದುರಾಳಿಗಳ ಎದೆ ನಡುಗಿಸುವಂತೆ ಆಡಬಲ್ಲ ಆಟಗಾರ್ತಿ ಪ್ರಶ್ನೆಗಳನ್ನು ಎದುರಿಸಲು ಇಷ್ಟು ಹೆಣಗಾಡಿದರೆ ಹೇಗೆ ಎಂದು ಕೇಳುವ ಅನೇಕರಿಗೆ ಆಟಗಾರ್ತಿಯ ಮನೋತುಮುಲ ಕಾಣಲು ಸಾಧ್ಯವಿಲ್ಲ.

ಪ್ರತಿಕ್ರಿಯಿಸಿ: feedback@sudha.co.in